ಸಂ/ಪ್ರಇ/ಸನಿ/ಸಿಆರ್- 19&20/2018-19 ದಿನಾಂಕ: 30.06.2018

**ಕರ್ನಾಟಕ ಸರ್ಕಾರ**
**(ಪ್ರವಾಸೋದ್ಯಮ ಇಲಾಖೆ)**

**ಪತ್ರಿಕಾ ಪ್ರಕಟಣೆ**

ಕರ್ನಾಟಕ ಪ್ರವಾಸೋದ್ಯಮ ಇಲಾಖೆ ವತಿಯಿಂದ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ. ಯೋಜನೆಯಡಿ ಬೀದರ ಜಿಲ್ಲೆಯಲ್ಲಿ ಪ.ಜಾ./ಪ.ಪಂ. ಮತ್ತು ಹಿಂದುಳಿದ ಹಾಗೂ ಅಲ್ಪ ಸಂಖ್ಯಾತ ವರ್ಗಕ್ಕೆ ಸೇರಿದ ನಿರುದ್ಯೋಗಿ ವಿದ್ಯಾವಂತ ಅಭ್ಯರ್ಥಿಗಳಿಗೆ ಸ್ವಯಂ ಉದ್ಯೋಗ ಕಲ್ಪಿಸಿಕೊಡಲು, ಸಹಾಯಧನದೊಂದಿಗೆ ಪ್ರವಾಸಿ ಟ್ಯಾಕ್ಸಿ ಒದಗಿಸಲು ಆನ್‌ಲೈನ ಅರ್ಜಿ ಅಹ್ವಾನ.

**bidar.nic.in**

ಕರ್ನಾಟಕ ಪ್ರವಾಸೋದ್ಯಮ ಇಲಾಖೆಯಿಂದ ಹಿಂದುಳಿದ ಹಾಗೂ ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದ ನಿರುದ್ಯೋಗಿ ಅಭ್ಯರ್ಥಿಗಳಿಗೆ 2018-19ನೇ ಸಾಲಿನಲ್ಲಿ ಬೀದರ ಜಿಲ್ಲೆಯಲ್ಲಿನ ಲಘು ವಾಹನ ಚಾಲನಾ ಪರವಾನಗಿ ಹೊಂದಿರುವ ಪರಿಶಿಷ್ಟ ಜಾತಿಗೆ ಸೇರಿದ ಅರ್ಹ ನಿರದ್ಯೋಗಿ ವಿದ್ಯಾವಂತ ಅಭ್ಯರ್ಥಿಗಳಿಗೆ **12** ಟ್ಯಾಕ್ಸಿ ವಾಹನಗಳನ್ನು ಹಾಗೂ ಪರಿಶಿಷ್ಟ ಪಂಡಗಕ್ಕೆ ಸೇರಿದ ಅರ್ಹ ನಿರದ್ಯೋಗಿ ವಿದ್ಯಾವಂತ ಅಭ್ಯರ್ಥಿಗಳಿಗೆ **06** ಟ್ಯಾಕ್ಸಿ ವಾಹನಗಳನ್ನು ಮತ್ತು ಹಿಂದುಳಿದ ಹಾಗೂ ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದ ಅರ್ಹ ನಿರದ್ಯೋಗಿ ವಿದ್ಯಾವಂತ ಅಭ್ಯರ್ಥಿಗಳಿಗೆ **08** ವಾಹನಗಳನ್ನು ಸ್ವಯಂ ಉದ್ಯೋಗ ಕಲ್ಪಿಸಿಕೊಳ್ಳುವ ದೃಷ್ಟಿಯಿಂದ ಪ್ರವಾಸಿಗೆ ತಾಣಗಳಿಗೆ ಪ್ರವಾಸಿಗರನ್ನು ಕರೆದುಕೊಂಡು ಹೋಗಲು ಒಟ್ಟು **26** ಪ್ರವಾಸಿ ಟ್ಯಾಕ್ಸಿಗಳನ್ನು ಇಲಾಖೆಯಿಂದ ಒದಗಿಸಲು ಉದ್ದೇಶಿಸಲಾಗಿದೆ.

ಆಯಾ ಜಿಲ್ಲಾ ಜನಸಂಖ್ಯೆಗನುಗುಣವಾಗಿ ನಿಗಧಿಪಡಿಸಿರುವ ಒಟ್ಟು ಗುರಿಯಲ್ಲಿ ತಾಲ್ಲೂಕುವಾರು ಜನ ಸಂಖ್ಯೆಗೆ ಅನುಗುಣವಾಗಿ ಗುರಿಯನ್ನು ನಿಗಧಿಪಡಿಸಿ ಅಭ್ಯರ್ಥಿಗಳ ಆಯ್ಕೆಯನ್ನು ಮಾಡಲಾಗುವುದು.

1. **ಅರ್ಜಿದಾರರು ಹೊಂದಿರಬೇಕಾದ ಅರ್ಹತೆಗಳು**

ಅ) ಅರ್ಜಿದಾರರು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಹಿಂದುಳಿದ ಅಥವಾ ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದವರಾಗಿರಬೇಕು.

ಆ) ಅರ್ಜಿದಾರರನ ವಯಸ್ಸು 20 ರಿಂದ 40 ವರ್ಷದೊಳಗಿರಬೇಕು.

ಇ) ಅರ್ಜಿದಾರರು 10ನೇ ತರಗತಿಯಲ್ಲಿ (45%) ಉತ್ತೀರ್ಣರಾಗಿರಬೇಕು.

ಈ) ಅಭ್ಯರ್ಥಿಗಳು ಲಘು ವಾಹನ ಚಾಲನಾ ಪರವಾನಗಿ ಪಡೆದು ಕನಿಷ್ಠ ಒಂದು ವರ್ಷವಾಗಿರಬೇಕು. ಅಭ್ಯರ್ಥಿಗಳು ವಾಹನ ಪರವಾನಗಿಯೊಂದಿಗೆ ಬ್ಯಾಡ್ಜ್ ಹೊಂದಿರತಕ್ಕದ್ದು.

ಉ) ನಗರ ಪ್ರದೇಶದ ಫಲಾನುಭವಿಗಳು ವಾರ್ಷಿಕ ಆದಾಯ **ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ** ರೂ 2.00 ಲಕ್ಷ ಮೀರಬಾರದು ಮತ್ತು **ಹಿಂದುಳಿದ ಹಾಗೂ ಅಲ್ಪಸಂಖ್ಯಾತರ ವರ್ಗಕ್ಕೆ** ರೂ 55,000/- ಗಳು ಮೀರಬಾರದು

ಊ) ಗ್ರಾಮಾಂತರ ಪ್ರದೇಶದ ಫಲಾನುಭವಿಗಳ ವಾರ್ಷಿಕ ಆದಾಯ **ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ** ರೂ 1.50 ಲಕ್ಷ ಮೀರಿರಬಾರದು ಮತ್ತು **ಹಿಂದುಳಿದ ಹಾಗೂ ಅಲ್ಪಸಂಖ್ಯಾತರ ವರ್ಗಕ್ಕೆ** ರೂ. 40,000/- ಗಳು ಮೀರಿರಬಾರದು.

ಋ) ಅರ್ಜಿದಾರರು ಯಾವ ಜಿಲ್ಲೆಯ ನಿವಾಸಿಯಾಗಿರುತ್ತಾರೋ ಅದೇ ಜಿಲ್ಲೆಯಲ್ಲಿ ಅರ್ಜಿ ಸಲ್ಲಿಸಬೇಕು.

ಎ) ಅರ್ಜಿದಾರನು ಯಾವುದೇ ಸರ್ಕಾರಿ ಇಲಾಖೆಯಲ್ಲಿ ಅಥವಾ ನಿಗಮ ಮಂಡಳಿಗಳಲ್ಲಿ ಖಾಯಂ ನೌಕರಿಯಲ್ಲಿರಬಾರದು.

ಏ) ಈಗಾಗಲೇ ಕುಟುಂಬದ ಸದಸ್ಯನೊಬ್ಬನು ಇಲಾಖೆಯಿಂದ ಪ್ರವಾಸಿ ಟ್ಯಾಕ್ಸಿ ಪಡೆದಿದ್ದರೆ ಅದೇ ಕುಟುಂಬದ ಮತ್ತೊಬ್ಬ ಸದಸ್ಯನಿಗೆ ಈ ಅವಕಾಶ ನೀಡಬಾರದು. ಕುಟುಂಬದ ಸದಸ್ಯನು ವಿವಾಹವಾಗಿ ಪ್ರತ್ಯೇಕವಾಗಿ ವಾಸವಿದ್ದಲ್ಲಿ, ಅರ್ಜಿ ಸಲ್ಲಿಸಲು ಅವಕಾಶ ನೀಡಬಹುದಾಗಿದೆ.

**2. ಅರ್ಜಿದಾರರು ಸಲ್ಲಿಸಬೇಕಾದ ದಾಖಲೆಗಳು:-**

ಅ) ಜಿಲ್ಲಾಧಿಕಾರಿಗಳಿಂದ ಜಾಹೀರಾತು ಪ್ರಕಟಣೆಗೊಂಡ 30 ದಿನಗಳ ಒಳಗಾಗಿ ಆನ್‌ಲೈನ್ ಅರ್ಜಿ ಸಲ್ಲಿಸುವುದು.

ಆ) ಪಡಿತರ ಚೀಟಿ ಹಾಗೂ ಆಧಾರ್ ಕಾರ್ಡ್‌ನ ಪ್ರತಿಗಳನ್ನು ಸಲ್ಲಿಸುವುದು ಕಡ್ಡಾಯವಾಗಿರುತ್ತದೆ.

ಇ) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ ಹಿಂದುಳಿದ ಅಥವಾ ಅಲ್ಪಸಂಖ್ಯಾತ ವರ್ಗಕ್ಕೆ ಸೇರಿರುವ ಬಗ್ಗೆ ತಹಶೀಲ್ದಾರರಿಂದ ಪಡೆದುಕೊಂಡಿರುವ ಚಾಲ್ತಿಯಲ್ಲಿರುವ ಜಾತಿ ಪ್ರಮಾಣ ಪತ್ರದ ಪ್ರತಿ.

ಈ) ತಹಶೀಲ್ದಾರರಿಂದ ಪಡೆದುಕೊಂಡಿರುವ ಚಾಲ್ತಿಯಲ್ಲಿರುವ ಆದಾಯದ ಪ್ರಮಾಣ ಪತ್ರದ ಪ್ರತಿ.

ಉ) ತಹಶೀಲ್ದಾರರಿಂದ ಪಡೆದಿರುವ ವಾಸಸ್ಥಳ ಧೃಢೀಕರಣ ಪತ್ರದ ಪ್ರತಿ.

ಊ) ಖಾಯಂ ಲಘು ವಾಹನ ಚಾಲನಾ ಪರವಾನಗಿ ಪತ್ರ ಹಾಗೂ ಆರ್.ಟಿ.ಓ. ರವರಿಂದ ಪಡೆದಿರುವ ಡಿ.ಎಲ್. ಎಕ್ಸ್‌ಟ್ರಾಕ್ಟ್‌ಗಳನ್ನು ಅರ್ಜಿಯೊಂದಿಗೆ ಲಗತ್ತಿಸಬೇಕು.

ಋ) ವಿದ್ಯಾರ್ಹತೆಯ ಬಗ್ಗೆ ಕನಿಷ್ಠ ಎಸ್.ಎಸ್.ಎಲ್.ಸಿ.ಯಲ್ಲಿ ಉತ್ತೀರ್ಣರಾಗಿರುವ ಅಂಕಪಟ್ಟಿಯ ಪ್ರತಿ.

ಎ) ಅರ್ಜಿದಾರನು ಯಾವುದೇ ಸರ್ಕಾರಿ ಇಲಾಖೆಯಲ್ಲಿ ಅಥವಾ ನಿಗಮ ಮಂಡಳಿಗಳಲ್ಲಿ ಖಾಯಂ ನೌಕರಿಯಲ್ಲಿರದ ಬಗ್ಗೆ. ಅಭ್ಯರ್ಥಿಯ ಕುಟುಂಬದಲ್ಲಿ ಯಾವ ಒಬ್ಬ ಸದಸ್ಯ ಸರ್ಕಾರಿ ನೌಕರಿ ಹೊಂದಲ್ಲದ ಬಗ್ಗೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ/ನಗರಸಭೆ/ಪುರಸಭೆ/ಪಟ್ಟಣ ಪಂಚಾಯ್ತಿ/ ಗ್ರಾಮ ಪಂಚಾಯ್ತಿ – ಇವುಗಳಿಂದ ಸ್ವಉದ್ಯೋಗ ಕಲ್ಪಿಸಿಕೊಳ್ಳುವ ಸೌಲಭ್ಯ ಪಡೆಯದೇ ಇರುವ ಬಗ್ಗೆ, ಕುಟುಂಬದ ಯಾವ ಸದಸ್ಯನು ಪ್ರವಾಸೋದ್ಯಮ ಇಲಾಖೆಯಿಂದ ಪ್ರವಾಸಿ ಟ್ಯಾಕ್ಸಿ ಪಡೆದಿಲ್ಲ ಎಂಬ ಬಗ್ಗೆ ಹಾಗೂ ಸ್ವಯಂ ಪ್ರಮಾಣೀಕರಿಸಿ, ರೂ. 50% ರ ಬೇಲೆಯ ಛಾಪಾ ಕಾಗದ (Affidavit)ದಲ್ಲಿ ನಮೂನೆ-3 ರಲ್ಲಿ ಪ್ರಮಾಣ ಪತ್ರವನ್ನು ಪಡೆಯತಕ್ಕದ್ದು.

ಏ) ಈಗಾಗಲೇ ಕುಟುಂಬದ ಸದಸ್ಯನೊಬ್ಬನು ಇಲಾಖೆಯಿಂದ ಪ್ರವಾಸಿ ಟ್ಯಾಕ್ಸಿ ಪಡೆದಿದ್ದರೆ ಅದೇ ಕುಟುಂಬದ ಮತ್ತೊಬ್ಬ ಸದಸ್ಯನಿಗೆ ಈ ಅವಕಾಶ ನೀಡಬಾರದು. ಕುಟುಂಬದ ಸದಸ್ಯನು ವಿವಾಹವಾಗಿ ಪ್ರತ್ಯೇಕವಾಗಿ ವಾಸವಿದ್ದಲ್ಲಿ, ಅರ್ಜಿ ಸಲ್ಲಿಸಲು ಅವಕಾಶ ನೀಡಬಹುದಾಗಿದೆ. ಈ ಸಂಬಂಧ ಅಭ್ಯರ್ಥಿಯಿಂದ ಪಡಿತರ ಚೀಟಿಯನ್ನು ಆಧಾರವಾಗಿ ಪಡೆಯತಕ್ಕದ್ದು.

ಐ) ಅರ್ಜಿಯಲ್ಲಿ ಅಭ್ಯರ್ಥಿಗಳ ದೂರವಾಣಿ ಸಂಖ್ಯೆಗಳನ್ನು ನಮೂದಿಸುವುದು ಖಡ್ಡಾಯ.

ಒ) ಆಯ್ಕೆಯಾದ ನಂತರ ಅಭ್ಯರ್ಥಿಗಳ ವಿರುದ್ಧ ಯಾವುದೇ ಕ್ರಿಮಿನಲ್ ಮೊಕದ್ದಮೆ ಇಲ್ಲದೇ ಇರುವ ಬಗ್ಗೆ ಆಯಾ ವ್ಯಾಪ್ತಿಯ ಪೋಲೀಸ್ ಠಾಣೆಯಿಂದ ಪೋಲೀಸ್ ನಿರಾಕ್ಷೇಪಣಾ ಪತ್ರವನ್ನು ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳು ಪಡೆಯುವುದು.

ಓ) ಅರ್ಜಿದಾರನು ಮೇಲಿ ಎಲ್ಲಾ ದಾಖಲಾತಿಗಳನ್ನು ಸ್ವಯಂ ದೃಢೀಕರಿಸಿ ಸಲ್ಲಿಸತಕ್ಕದ್ದು.

ಔ) ಆಯ್ಕೆಯಾದ ಅಭ್ಯರ್ಥಿಗಳಿಂದ ತಮಗೆ ವಿತರಿಸುವ ಪ್ರವಾಸಿ ವಾಹನವನ್ನು ಯಾರಿಗೂ ಪರಭಾರೆ ಮಾಡುವುದಿಲ್ಲವೆಂದು ನೋಟರಿಯಿಂದ ಪ್ರಮಾಣೀಕರಿಸಿ ರೂ. 50/- ರ ಬೆಲೆ ಛಾಪಾ ಕಾಗದ (Affidavit) ದಲ್ಲಿ ಮುಚ್ಚಳಿಗೆ ಪಡೆಯತಕ್ಕದ್ದು.

**3. ಷರತ್ತುಗಳು:-**

ಅ) ಫಲಾನುಭವಿಯೇ ಸ್ವತಃ ಟ್ಯಾಕ್ಸಿಯನ್ನು ಓಡಿಸಬೇಕು ಹೊರತು ಬೇರೆಯವರಿಗೆ ಪರಭಾರೆ ಮಾಡುವಂತಿಲ್ಲ. ಒಂದು ವೇಳೆ ಪರಭಾರೆ ಮಾಡಿರುವುದು ಕಂಡುಬಂದಲ್ಲಿ ಟ್ಯಾಕ್ಸಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಈ ಬಗ್ಗೆ ಜಿಲ್ಲಾಧಿಕಾರಿಗಳು ಆರ್.ಟಿ.ಓ.ಗಳಿಗೆ ಪತ್ರ ಮುಖೇನ ತಿಳಿಸುವುದು. ಸದರಿ ವಾಹನವನ್ನು (05) ವರ್ಷಗಳವರೆಗೆ ಬೇರೆಯವರಿಗೆ ವರ್ಗಾವಣೆ ಮಾಡದಂತೆ ಕ್ರಮವಹಿಸುವುದು.

ಆ) ಪ್ರತಿ ವರ್ಷ ಫಲಾನುಭವಿಯು ಗಳಿಸಿದ ಆದಾಯದ ವಿವರಗಳನ್ನು ಜಿಲ್ಲಾ ಮಟ್ಟದ ಇಲಾಖೆಯ ಕಚೇರಿಗೆ ನೀಡುವುದು.

ಇ) ಫಲಾನುಭವಿಯು ತೆಗೆದುಕೊಳ್ಳುವ ಬ್ಯಾಂಕಿನ ಸಾಲದ ಮೊತ್ತವನ್ನು ನಿರಂತರವಾಗಿ ಮರುಪಾವತಿ ಮಾಡುವುದು.

ಈ) ಫಲಾನುಭವಿಗಳಿಗೆ ವಿತರಿಸುವ ಪ್ರವಾಸಿ ಟ್ಯಾಕ್ಸಿಯನ್ನು ಸಾಲ ಮಂಜೂರಾತಿ ಮಾಡಿದ ಬ್ಯಾಂಕ್ ಹೆಸರಿಗೆ ಅಡಮಾನಿಗೆ (Hypothecation) ಮಾಡಿಕೊಳ್ಳತಕ್ಕದ್ದು. ಈ ಬಗ್ಗೆ ಸಂಬಂಧಪಟ್ಟ ಅಧೀನ ಕಚೇರಿಯ ಪ್ರವಾಸೋದ್ಯಮ ಇಲಾಖೆಯ ಅಧಿಕಾರಿಗಳು ಅಗತ್ಯ ಕ್ರಮ ವಹಿಸತಕ್ಕದ್ದು.

ಉ) ಫಲಾನುಭವಿಗಳು ಪ್ರವಾಸಿಗರೊಡನೆ ಉತ್ತಮ ನಡುವಳಿಕೆಯಿಂದ ವರ್ತಿಸುವುದು. ಕನ್ನಡ ಭಾಷಾ ಜ್ಞಾನ ಹಾಗೂ ಇತರೆ ಭಾಷೆಗಳ ಪರಿಣಿತಿ, ಪ್ರವಾಸಿ ಸ್ಥಳಗಳ ಪರಿಚಯ ಮುಂತಾದ ವಿಷಯಗಳ ಬಗ್ಗೆ ಸಾಮಾನ್ಯ ಜ್ಞಾನ ಹೊಂದಿದ್ದ ಅನುಕೂಲವಾಗುವುದು.

**ಯಾವುದೇ ಕಾರಣ ನೀಡದೆ ಅರ್ಜಿಯನ್ನು ಅಂಗೀಕರಿಸ ಇಲ್ಲವೇ ತಿರಸ್ಕರಿಸುವ ಹಕ್ಕನ್ನು ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು ಆಯ್ಕೆ ಸಮಿತಿ ಬೀದರ ರವರು ಹೊಂದಿರುತ್ತಾರೆ.**

ಅರ್ಜಿ ಭರ್ತಿ ಮಾಡುವ ದಿನಾಂಕ 02.07.2018 ರಿಂದ 31.07.2018 ರಂದು ಸಂಜೆ 5.00 ಗಂಟೆಯೊಳಗ **bidar.nic.in** ಇಂದ ಅರ್ಜಿ ನಮೂನೆಯನ್ನು ಪಡೆದು ಆನ್‌ಲೈನ್‌ನಲ್ಲಿ ಭರ್ತಿ ಮಾಡಬೇಕಾಗಿರುತ್ತದೆ.

**ಜಿಲ್ಲಾಧಿಕಾರಿ**
**ಹಾಗೂ ಅಧ್ಯಕ್ಷರು**
**ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿ**
**ಬೀದರ ಜಿಲ್ಲೆ, ಬೀದರ**

# ಅರ್ಜಿ ನಮೂನೆ

ಕ್ರಮ ಸಂಖ್ಯೆ:

**ಪ್ರವಾಸೋದ್ಯಮ ಇಲಾಖೆ, ಬೀದರ ಜಿಲ್ಲೆ, ಬೀದರ**

**2018-19ನೇ ಎಸ್‌ಸಿಎಸ್‌ಪಿ/ಟಿಎಸ್‌ಪಿ ಯೋಜನೆಯಡಿ ಪರಿಶಿಷ್ಟ ಜಾತಿ/ಪರಿಶಿಷ್ಠ ಪಂಗಡ**

**ಪ್ರವಾಸಿ ಟ್ಯಾಕ್ಸಿ ಖರೀದಿಸಲು ಸಹಾಯಧನ ಸೌಲಭ್ಯ ಕೋರಿ ಅರ್ಜಿ**

| | | |
|---|---|---|
| **01** | ಅಭ್ಯರ್ಥಿಯ ಹೆಸರು:<br>ತಂದೆಯ ಹೆಸರು :<br>ಪೂರ್ಣ ವಿಳಾಸ :<br>ಪಿನ್ ಕೋಡ್ ಸಂಖ್ಯೆ : | |
| **02** | ದೂರವಾಣಿ ಸಂಖ್ಯೆ : | |
| **03** | ವಿದಾನಸಭಾ ಕ್ಷೇತ್ರದ ಹೆಸರು : | |
| **04** | ಪಡಿತರ ಚೀಟಿ ಹಾಗೂ ಆಧಾರ ಕಾರ್ಡ ಕಡ್ಡಾಯ (ಪ್ರತಿ ಲಗತ್ತಿಸಬೇಕು.) | |
| **05** | ಜಾತಿ/ಉಪಜಾತಿ: ಪ್ರಮಾಣ ಪತ್ರ<br>(ತಹಸೀಲ್ದಾರ್‌ರವರಿಂದ ಪಡೆದ ಚಾಲ್ತಿಯಲ್ಲಿರುವ ಜಾತಿ ಪ್ರಮಾಣಪತ್ರದ ಪ್ರತಿ ಲಗತ್ತಿಸಬೇಕು) | |
| **06** | ಕುಟುಂಬದ ವಾರ್ಷಿಕ ಆದಾಯ ಪತ್ರ (ತಹಸೀಲ್ದಾರ್‌ರವರಿಂದ ಪಡೆದ ಪ್ರಸಕ್ತ ಸಾಲಿನ ಚಾಲ್ತಿಯಲ್ಲಿರುವ ಆದಾಯ ಪ್ರಮಾಣಪತ್ರದ ಪ್ರತಿ ಲಗತ್ತಿಸಬೇಕು) | |
| **07** | ವಾಸಸ್ಥಳ ಧೃಢೀಕರಣ (ತಹಸೀಲ್ದಾರ್ ರವರಿಂದ ಪಡೆದ ಚಾಲ್ತಿಯಲ್ಲಿರುವ ಪ್ರಮಾಣಪತ್ರದ ಪ್ರತಿ ಲಗತ್ತಿಸಬೇಕು) | |
| **08** | ಪರಿಶಿಷ್ಟ ಜಾತಿಯವರು ಡಾ: ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ಹಾಗೂ ಪರಿಶಿಷ್ಟ ಪಂಗಡದವರು ಅಭಿವೃದ್ಧಿ ನಿಗಮ ಮಹರ್ಷಿ ವಾಲ್ಮೀಕಿ ಅಭಿವೃಧ್ಧಿ ನಿಗಮ ರವರಿಂದ ಇದುವರೆಗೂ ಯಾವುದೇ ರೀತಿಯ ಸರಕಾರಿ ಸೌಲಭ್ಯ ಪಡೆಯದೇ ಇರುವ ಬಗ್ಗೆ ಪ್ರಮಾಣಪತ್ರ ಪಡೆದು ಪ್ರತಿ ಲಗತ್ತಿಸಬೇಕು. | |
| **09** | ಸಾರಿಗೆ ಇಲಾಖೆಯಿಂದ ವಾಹನ ಚಾಲನೆ ಮಾಡಲು ಪಡೆದ ಖಾಯಂ ಲಘು ಮೋಟಾರು ವಾಹನ ಚಾಲನೆ ಪರವಾನಗಿ ಹಾಗೂ ಬ್ಯಾಡ್ಜ ಪತ್ರದ ಪ್ರತಿ ಹಾಗೂ ಆರ್.ಟಿ.ಓ. ರವರಿಂದ ಪಡೆದಿರುವ ಡಿ.ಎಲ್. ಎಕ್ಸ್‌ಟ್ರ್ಯಾಕ್ಟ್ ಪ್ರತಿ ಲಗತ್ತಿಸಬೇಕು. | |
| **10** | ವಿದ್ಯಾರ್ಹತೆ: ಎಸ್.ಎಸ್.ಎಲ್.ಸಿ.<br>(ಕನಿಷ್ಠ 45% ಮೇಲ್ಪಟ್ಟ ಅಭ್ಯರ್ಥಿಗಳು ಮಾತ್ರ ಅರ್ಜಿ ಸಲ್ಲಿಸಲು ಅರ್ಹರಿರುತ್ತಾರೆ. ಅಂಕಪಟ್ಟಿಯ ಸ್ವಯಂಧೃಢಿಕರಿಸಿದ ಪ್ರತಿ ಲಗತ್ತಿಸಬೇಕು.) | |
| **11** | ಎಸ್.ಎಸ್.ಎಲ್.ಸಿ. ಅಂಕಪಟ್ಟಿಯಲ್ಲಿ ಇರುವಂತೆ<br>ಜನ್ಮ ದಿನಾಂಕ ಮತ್ತು ವಯಸ್ಸು:<br>(ಅರ್ಜಿ ಸಲ್ಲಿಸಲು ನಿಗಧಿಪಡಿಸಿರುವ ಕೊನೆಯ ದಿನಾಂಕದಂದು 40 ವರ್ಷ ಮೀರಿರಬಾರದು) | |
| **12** | ನಿರುದ್ಯೋಗಿ ಧೃಢೀಕರಣ ಪತ್ರ, ಸಂ.ದಿ.<br>(ಅರ್ಜಿದಾರರು ಕೇಂದ್ರ/ರಾಜ್ಯ ಸರ್ಕಾರದ ಇಲಾಖೆಗಳಲ್ಲಿ ಹಾಗೂ ನಿಗಮ ಮಂಡಳಿಗಳಲ್ಲಿ ಖಾಯಂ ಉದ್ಯೋಗ ಹೊಂದಿರದ ಬಗ್ಗೆ ನಿರುದ್ಯೋಗಿಯಾಗಿರುವ ಬಗ್ಗೆ ಸಂಬಂಧಪಟ್ಟ ತಹಸೀಲ್ದಾರರವರಿಂದ ಪಡೆದ ಪ್ರಮಾಣಪತ್ರದ ಪ್ರತಿ ಲಗತ್ತಿಸಬೇಕು.) | |
| **13** | ಅರ್ಜಿದಾರರ ತಂದೆ, ತಾಯಿ ಅಥವಾ ಅವರ ಕುಟುಂಬದ ಸದಸ್ಯರು ಕೇಂದ್ರ/ರಾಜ್ಯ ಸರ್ಕಾರ/ಅರೆ ಸರ್ಕಾರಿ ಇತರೇ ಸರ್ಕಾರದ ಅಂಗ ಸಂಸ್ಥೆಗಳಲ್ಲಿ ಖಾಯಂ ಉದ್ಯೋಗ ಹೊಂದಿರದ ಬಗ್ಗೆ ಸಂಬಂಧಪಟ್ಟ ತಹಶೀಲ್ದಾರರವರಿಂದ ಪಡೆದ ಪ್ರಮಾಣ ಪತ್ರದ ಪ್ರತಿ ಲಗತ್ತಿಸಬೇಕು. | |

| | | |
|---|---|---|
| **14** | ವಾಸವಾಗಿರುವ ವ್ಯಾಪ್ತಿಯ ಪೋಲಿಸ್ ಠಾಣೆಯಿಂದ ಯವುದೇ ಕ್ರಿಮಿನಲ್ ಮೊಕದ್ದಮೆ ಇರದ ಬಗ್ಗೆ ನಿರಾಪೇಕ್ಷಣ ಪತ್ರ ಆಯ್ಕೆಯಾದ ನಂತರ ಸಲ್ಲಿಸುವುದು ಕಡ್ಡಾಯವಾಗಿರುತ್ತದೆ. | |
| **15** | ಅರ್ಜಿದಾರರು ತಿಳಿದಿರುವ ಭಾಷೆಗಳ ಮಾಹಿತಿ ಒದಗಿಸುವುದು. | ಓದಲು:<br><br>ಬರೆಯಲು:<br><br>ಮಾತನಾಡಲು: |
| **16** | ಅಭ್ಯರ್ಥಿಯು ಒದಗಿಸಲು ಬಯಸುವ ಇತರೇ ಹೆಚ್ಚುವರಿ ಮಾಹಿತಿ. | |

- ಅರ್ಜಿದಾರರ ತಂದೆ, ತಾಯಿ ಅಥವಾ ಅವರ ಕುಟುಂಬದ ಸದಸ್ಯರು ಖಾಯಂ ನೌಕರಿಯಲ್ಲಿರದ ಬಗ್ಗೆ, ಅಭ್ಯರ್ಥಿಯ ಕುಟುಂಬದಲ್ಲಿ ಯಾವ ಒಬ್ಬ ಸದಸ್ಯನು ಸರ್ಕಾರಿ ನೌಕರ ಹೊಂದಿಲ್ಲದೆ ಬಗ್ಗೆ ಹಾಗೂ ಕುಟುಂಬದ ಯಾವ ಸದಸ್ಯನು ಪ್ರವಾಸೋದ್ಯಮ ಇಲಾಖೆಯಿಂದ ಪ್ರವಾಸಿ ಟ್ಯಾಕ್ಸಿ ಪಡೆದಿಲ್ಲ ಎಂಬ ಬಗ್ಗೆ ಹಾಗೂ ಸ್ವಯಂ ಪ್ರಮಾಣಿಕರಿಸಿ, ರೂ. 50/- ರ ಬೆಲೆಯ ಛಾಪಾ ಕಾಗದದಲ್ಲಿ ಪ್ರಮಾಣ ಪತ್ರವನ್ನು ಒದಗಿಸುವುದು.
- ಆಯ್ಕೆಯಾದ ಅಭ್ಯರ್ಥಿಗಳಿಂದ ತಮಗೆ ವಿತರಿಸುವ ಪ್ರವಾಸಿ ವಾಹನವನ್ನು ಯಾರಿಗೂ ಪರಭಾರೆ ಮಾಡುವುದಿಲ್ಲವೆಂದು ನೋಟರಿಯಿಂದ ಪ್ರಮಾಣಿಕರಿಸಿರಿ ರೂ. 50/-ರ ಬೆಲೆ ಛಾಪಾ ಕಾಗದದಲ್ಲಿ ಮುಚ್ಚಳಿಗೆ ಒದಗಿಸುವುದು.
- ಮೇಲಿನ ಎಲ್ಲಾ ದಾಖಲಾತಿಗಳನ್ನು ಸ್ವಯಂ ಧೃಢೀಕರಿಸಿ ದ್ವಿಪ್ರತಿಯಲ್ಲಿ ಸಲ್ಲಿಸತಕ್ಕದ್ದು.

ಮೇಲಿನ ಅರ್ಜಿ ನಮೂನೆಯಲ್ಲಿ ನೀಡಿರುವ ಎಲ್ಲಾ ಮಾಹಿತಿಗಳು ಸತ್ಯವಾಗಿರುತ್ತೆವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

**ಸ್ಥಳ :**

**ದಿನಾಂಕ :**

**ಅಭ್ಯರ್ಥಿಯ ಸಹಿ ಹಾಗೂ ಎಡ ಹೆಬ್ಬಟ್ಟಿನ ಗುರುತು**

# ಅರ್ಜಿ ನಮೂನೆ

ಕ್ರಮ ಸಂಖ್ಯೆ:

**ಪ್ರವಾಸೋದ್ಯಮ ಇಲಾಖೆ, ಬೀದರ ಜಿಲ್ಲೆ, ಬೀದರ**

**2018-19ನೇ ಸಾಲಿನ ಹಿಂದುಳಿದ ಹಾಗೂ ಅಲ್ಪಸಂಖ್ಯಾತರ**

**ಪ್ರವಾಸಿ ಟ್ಯಾಕ್ಸಿ ಖರೀದಿಸಲು ಸಹಾಯಧನ ಸೌಲಭ್ಯ ಕೋರಿ ಅರ್ಜಿ**

| | | |
|---|---|---|
| **01** | ಅಭ್ಯರ್ಥಿಯ ಹೆಸರು:<br><br>ತಂದೆಯ ಹೆಸರು :<br><br>ಪೂರ್ಣ ವಿಳಾಸ :<br><br>ಪಿನ್ ಕೋಡ್ ಸಂಖ್ಯೆ : | |
| **02** | ದೂರವಾಣಿ ಸಂಖ್ಯೆ : | |
| **03** | ವಿದಾನಸಭಾ ಕ್ಷೇತ್ರದ ಹೆಸರು : | |
| **04** | ಪಡಿತರ ಚೀಟಿ ಹಾಗೂ ಆಧಾರ ಕಾರ್ಡ ಕಡ್ಡಾಯ (ಪ್ರತಿ ಲಗತ್ತಿಸಬೇಕು.) | |
| **05** | ಜಾತಿ/ಉಪಜಾತಿ: ಪ್ರಮಾಣ ಪತ್ರ<br>(ತಹಸೀಲ್ದಾರ್‌ರವರಿಂದ ಪಡೆದ ಚಾಲ್ತಿಯಲ್ಲಿರುವ ಜಾತಿ ಪ್ರಮಾಣಪತ್ರದ ಪ್ರತಿ ಲಗತ್ತಿಸಬೇಕು) | |
| **06** | ಕುಟುಂಬದ ವಾರ್ಷಿಕ ಆದಾಯ ಪತ್ರ (ತಹಸೀಲ್ದಾರ್‌ರವರಿಂದ ಪಡೆದ ಪ್ರಸಕ್ತ ಸಾಲಿನ ಚಾಲ್ತಿಯಲ್ಲಿರುವ ಆದಾಯ ಪ್ರಮಾಣಪತ್ರದ ಪ್ರತಿ ಲಗತ್ತಿಸಬೇಕು) | |
| **07** | ವಾಸಸ್ಥಳ ಧೃಢೀಕರಣ (ತಹಸೀಲ್ದಾರ್ ರವರಿಂದ ಪಡೆದ ಚಾಲ್ತಿಯಲ್ಲಿರುವ ಪ್ರಮಾಣಪತ್ರದ ಪ್ರತಿ ಲಗತ್ತಿಸಬೇಕು) | |
| **08** | ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಅಭಿವೃದ್ಧಿ/ಜಿಲ್ಲಾ ಹಿಂದುಳಿದ ವರ್ಗಗಳಿಂದ ಇದುವರೆಗೂ ಯಾವುದೇ ರೀತಿಯ ಸರಕಾರಿ ಸೌಲಭ್ಯ ಪಡೆಯದೇ ಇರುವ ಬಗ್ಗೆ ಪ್ರಮಾಣಪತ್ರ ಪಡೆದು ಪ್ರತಿ ಲಗತ್ತಿಸಬೇಕು | |
| **09** | ಸಾರಿಗೆ ಇಲಾಖೆಯಿಂದ ವಾಹನ ಚಾಲನೆ ಮಾಡಲು ಪಡೆದ ಖಾಯಂ ಲಘು ಮೋಟಾರು ವಾಹನ ಚಾಲನೆ ಪರವಾನಗಿ ಹಾಗೂ ಬ್ಯಾಡ್ಜ ಪತ್ರದ ಪ್ರತಿ ಹಾಗೂ ಆರ್.ಟಿ.ಓ. ರವರಿಂದ ಪಡೆದಿರುವ ಡಿ.ಎಲ್. ಎಕ್ಸ್‌ಟ್ರ್ಯಾಕ್ಟ್ ಪ್ರತಿ ಲಗತ್ತಿಸಬೇಕು. | |
| **10** | ವಿದ್ಯಾರ್ಹತೆ: ಎಸ್.ಎಸ್.ಎಲ್.ಸಿ.<br>(ಕನಿಷ್ಟ 45% ಮೇಲ್ಪಟ್ಟ ಅಭ್ಯರ್ಥಿಗಳು ಮಾತ್ರ ಅರ್ಜಿ ಸಲ್ಲಿಸಲು ಅರ್ಹರಿರುತ್ತಾರೆ. ಅಂಕಪಟ್ಟಿಯ ಸ್ವಯಂಧೃಢಿಕರಿಸಿದ ಪ್ರತಿ ಲಗತ್ತಿಸಬೇಕು.) | |
| **11** | ಎಸ್.ಎಸ್.ಎಲ್.ಸಿ. ಅಂಕಪಟ್ಟಿಯಲ್ಲಿ ಇರುವಂತೆ<br>ಜನ್ಮ ದಿನಾಂಕ ಮತ್ತು ವಯಸ್ಸು:<br>(ಅರ್ಜಿ ಸಲ್ಲಿಸಲು ನಿಗಧಿಪಡಿಸಿರುವ ಕೊನೆಯ ದಿನಾಂಕದಂದು 40 ವರ್ಷ ಮೀರಿರಬಾರದು) | |
| **12** | ನಿರುದ್ಯೋಗಿ ಧೃಢೀಕರಣ ಪತ್ರ. ಸಂ.ದಿ.<br>(ಅರ್ಜಿದಾರರು ಕೇಂದ್ರ/ರಾಜ್ಯ ಸರ್ಕಾರದ ಇಲಾಖೆಗಳಲ್ಲಿ ಹಾಗೂ ನಿಗಮ ಮಂಡಳಿಗಳಲ್ಲಿ ಖಾಯಂ ಉದ್ಯೋಗ ಹೊಂದಿರದ ಬಗ್ಗೆ ನಿರುದ್ಯೋಗಿಯಾಗಿರುವ ಬಗ್ಗೆ ಸಂಬಂಧಪಟ್ಟ ತಹಸೀಲ್ದಾರರವರಿಂದ ಪಡೆದ ಪ್ರಮಾಣಪತ್ರದ ಪ್ರತಿ ಲಗತ್ತಿಸಬೇಕು.) | |

| | | |
|---|---|---|
| **13** | ಅರ್ಜಿದಾರರ ತಂದೆ, ತಾಯಿ ಅಥವಾ ಅವರ ಕುಟುಂಬದ ಸದಸ್ಯರು ಕೇಂದ್ರ/ರಾಜ್ಯ ಸರ್ಕಾರ/ಅರೆ ಸರ್ಕಾರಿ ಇತರೇ ಸರ್ಕಾರದ ಅಂಗ ಸಂಸ್ಥೆಗಳಲ್ಲಿ ಖಾಯಂ ಉದ್ಯೋಗ ಹೊಂದಿರದ ಬಗ್ಗೆ ಸಂಬಂಧಪಟ್ಟ ತಹಶೀಲ್ದಾರರವರಿಂದ ಪಡೆದ ಪ್ರಮಾಣ ಪತ್ರದ ಪ್ರತಿ ಲಗತ್ತಿಸಬೇಕು. | |
| **14** | ವಾಸವಾಗಿರುವ ವ್ಯಾಪ್ತಿಯ ಪೋಲಿಸ್ ಠಾಣೆಯಿಂದ ಯವುದೇ ಕ್ರಿಮಿನಲ್ ಮೊಕದ್ದಮೆ ಇರದ ಬಗ್ಗೆ ನಿರಾಪೇಕ್ಷಣ ಪತ್ರ ಆಯ್ಕೆಯಾದ ನಂತರ ಸಲ್ಲಿಸುವುದು ಕಡ್ಡಾಯವಾಗಿರುತ್ತದೆ. | |
| **15** | ಅರ್ಜಿದಾರರು ತಿಳಿದಿರುವ ಭಾಷೆಗಳ ಮಾಹಿತಿ ಒದಗಿಸುವುದು. | ಓದಲು:<br><br>ಬರೆಯಲು:<br><br>ಮಾತನಾಡಲು: |
| **16** | ಅಭ್ಯರ್ಥಿಯು ಒದಗಿಸಲು ಬಯಸುವ ಇತರೇ ಹೆಚ್ಚುವರಿ ಮಾಹಿತಿ. | |

- ಅರ್ಜಿದಾರರ ತಂದೆ, ತಾಯಿ ಅಥವಾ ಅವರ ಕುಟುಂಬದ ಸದಸ್ಯರು ಖಾಯಂ ನೌಕರಿಯಲ್ಲಿರದ ಬಗ್ಗೆ, ಅಭ್ಯರ್ಥಿಯ ಕುಟುಂಬದಲ್ಲಿ ಯಾವ ಒಬ್ಬ ಸದಸ್ಯನು ಸರ್ಕಾರಿ ನೌಕರ ಹೊಂದಿಲ್ಲದೆ ಬಗ್ಗೆ ಹಾಗೂ ಕುಟುಂಬದ ಯಾವ ಸದಸ್ಯನು ಪ್ರವಾಸೋದ್ಯಮ ಇಲಾಖೆಯಿಂದ ಪ್ರವಾಸಿ ಟ್ಯಾಕ್ಸಿ ಪಡೆದಿಲ್ಲ ಎಂಬ ಬಗ್ಗೆ ಹಾಗೂ ಸ್ವಯಂ ಪ್ರಮಾಣೀಕರಿಸಿ, ರೂ. 50/- ರ ಬೆಲೆಯ ಛಾಪಾ ಕಾಗದದಲ್ಲಿ ಪ್ರಮಾಣ ಪತ್ರವನ್ನು ಒದಗಿಸುವುದು.
- ಆಯ್ಕೆಯಾದ ಅಭ್ಯರ್ಥಿಗಳಿಂದ ತಮಗೆ ವಿತರಿಸುವ ಪ್ರವಾಸಿ ವಾಹನವನ್ನು ಯಾರಿಗೂ ಪರಭಾರೆ ಮಾಡುವುದಿಲ್ಲವೆಂದು ನೋಟರಿಯಿಂದ ಪ್ರಮಾಣೀಕರಿಸಿರಿ ರೂ. 50/-ರ ಬೆಲೆ ಛಾಪಾ ಕಾಗದದಲ್ಲಿ ಮುಚ್ಚಳಿಗೆ ಒದಗಿಸುವುದು.
- ಮೇಲಿನ ಎಲ್ಲಾ ದಾಖಲಾತಿಗಳನ್ನು ಸ್ವಯಂ ಧೃಢೀಕರಿಸಿ ದ್ವಿಪ್ರತಿಯಲ್ಲಿ ಸಲ್ಲಿಸತಕ್ಕದ್ದು.

ಮೇಲಿನ ಅರ್ಜಿ ನಮೂನೆಯಲ್ಲಿ ನೀಡಿರುವ ಎಲ್ಲಾ ಮಾಹಿತಿಗಳು ಸತ್ಯವಾಗಿರುತ್ತವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

**ಸ್ಥಳ :**

**ದಿನಾಂಕ :**

**ಅಭ್ಯರ್ಥಿಯ ಸಹಿ ಹಾಗೂ ಎಡ ಹೆಬ್ಬಟ್ಟಿನ ಗುರುತು**